ಈಶಾನ್ಯ ರಾಜ್ಯಗಳ ಗಡಿ ಪ್ರದೇಶಗಳು. ಎರಡನೆಯದೆಂದರೆ ನಕ್ಸಲ್‌ವಾದಿಗಳು ಸರ್ಕಾರದ ಸ್ಥಾಪಿತ ಆಡಳಿತಯಂತ್ರದ ವಿರುದ್ಧ ನೇರವಾಗಿಯೆ ಬಂಡಾಯವೆದ್ದಿರುವ ದೇಶದ ಸುಮಾರು ಮೂರನೆಯ ಒಂದು ಭಾಗದಷ್ಟು ಜಿಲ್ಲೆಗಳು. ಅತಿಯಾದ ಭ್ರಷ್ಟಾಚಾರದಿಂದ ತನ್ನ ಪ್ರಸ್ತುತತೆಯನ್ನೇ ಕಳೆದುಕೊಂಡು ಸರ್ಕಾರವು ನಿರ್ವೀರ್ಯವಾಗಿರುವ ಇಂದಿನ ಸನ್ನಿವೇಶದಲ್ಲಿ ಈ ಹೋರಾಟಗಾರರೇ ಜನರಿಗೆ ಪ್ರಸ್ತುತವೆನ್ನಿಸಿದರೆ, ಅವರಲ್ಲಿ ಆಶೋತ್ತರಗಳನ್ನು ಮೂಡಿಸಿದರೆ, ಅಚ್ಚರಿಯೇನಿದೆ? ಸರ್ಕಾರದ ಹೃದಯಹೀನ ಕಾರ್ಯನಿರ್ವಹಣೆಯಲ್ಲಿ ಬಡಜನತೆಗೂ ಹರಿಜನ–ಗಿರಿಜನರಂತಹ ಹಿಂದುಳಿದವರಿಗೂ ಅಭಿವೃದ್ಧಿಪಥದಲ್ಲಿ ತಮ್ಮನ್ನು ಅವಗಣಿಸಲಾಗಿದೆ ಎನ್ನಿಸಿರುವುದರಿಂದಲೇ ನಕ್ಸಲೀಯರು ದಿನೇ ದಿನೇ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ.

ಭಾರತದಲ್ಲಿನ ಇನ್ನೊಂದು ವಿಶೇಷವೆಂದರೆ, ರಾಜಕೀಯವು ಅಪರಾಧಿಗಳಿಂದ ಮತ್ತು ಪಾತಕಿಗಳಿಂದ ತುಂಬಿಹೋಗುತ್ತಿರುವುದು. ಕಳೆದ ಚುನಾವಣೆಗಳಲ್ಲಿ ಸಂಸತ್ತಿಗೆ ಆರಿಸಿ ಬಂದ ಸದಸ್ಯರಲ್ಲಿ ಶೇಕಡ ೨೫ ರಷ್ಟು ಜನರ ವಿರುದ್ಧ ಹಲವಾರು ಆರೋಪಗಳಿವೆಯೆಂದರೆ ಅನೇಕರಿಗೆ ಆಶ್ಚರ್ಯವಾಗಬಹುದು! ಭಾರತವು ಒಂದು ಪಾತಕಿಗಳ ದೇಶವಾಗಿ ಬೆಳೆಯುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಭಾರತದ ನ್ಯಾಯಾಲಯಗಳಲ್ಲಿ ನಿಜವಾಗಿ ಶಿಕ್ಷೆಯಾಗುವುದು ಕೇವಲ ಶೇಕಡ ೬ ರಷ್ಟು ಅಪರಾಧಿಗಳಿಗೆ ಮಾತ್ರ. ಭಾರತದ ನ್ಯಾಯಾಂಗವು ಶಿಕ್ಷೆ ಜಾರಿಯಾಗುವ ಪ್ರಮಾಣದಲ್ಲಿ ಮಾತ್ರವಲ್ಲ, ನ್ಯಾಯತೀರ್ಮಾನ ಮಾಡುವ ಗುಣಮಟ್ಟದಲ್ಲಿಯೂ ತುಂಬಾ ಹಿಂದಿದೆ. ಭಾರತದ ನ್ಯಾಯಾಲಯಗಳಲ್ಲಿ ಇಂದು ತೀರ್ಮಾನವಾಗದೆ ಉಳಿದ ಸುಮಾರು ೩೦ ಮಿಲಿಯ ಪ್ರಕರಣಗಳಿವೆ! ಇಂದಿನಿಂದಲೇ ಇನ್ನು ಒಂದೇ ಒಂದು ಪ್ರಕರಣವನ್ನೂ ದಾಖಲು ಮಾಡಿಕೊಳ್ಳದಿದ್ದರೂ, ಈಗಿರುವ ಈ ಪ್ರಕರಣಗಳು ತೀರ್ಮಾನವಾಗಲು ಇನ್ನೂ ೩೦೦ ವರ್ಷಗಳು ಬೇಕಾಗಬಹುದು.

ಸರ್ಕಾರದಲ್ಲಿರುವ ಭ್ರಷ್ಟಾಚಾರದ ವಿರುದ್ಧ ಸಮರ ಹೂಡುವ ಮೊದಲು, ವ್ಯಾವಹಾರಿಕವಾದ ನಿವಾರಣೋಪಾಯವೊಂದನ್ನು ನಾವು ಕಂಡುಕೊಳ್ಳಬೇಕು. ಸರ್ಕಾರದಲ್ಲಿರುವವರೇ ಸರಕಾರಿ ಯಂತ್ರದ ಪ್ರಯೋಜನವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವಾಗ, ರಾಜಕೀಯವು ಕಪ್ಪುಹಣದ ಬಲದ ಮೇಲೆಯೇ ನಿಂತಿರುವಾಗ, ಇದು ಹೇಗೆ ತಾನೇ ಸಾಧ್ಯ? ಭ್ರಷ್ಟಾಚಾರ ನಿರ್ಮೂಲನೆಯ ಹೊರತು ಅನ್ಯಮಾರ್ಗವಿಲ್ಲವೆನ್ನುವುದನ್ನು ನಮ್ಮ ಧುರೀಣರು ಮೊದಲು ಮನಗಾಣಬೇಕು. ಈ ವಿಷ ವರ್ತುಲದಲ್ಲಿರುವ ರಾಜಕಾರಣಿಗಳ, ಅಧಿಕಾರವರ್ಗದವರ ಹಾಗೂ ನ್ಯಾಯಾಲಯಗಳಲ್ಲಿನ ಭ್ರಷ್ಟಾಚಾರಗಳ ನಿರ್ಮೂಲನೆಗೆ ಪ್ರತ್ಯೇಕವಾದ ನಿವಾರಣೋಪಾಯಗಳನ್ನು ನಾವು ಕಂಡುಕೊಳ್ಳಬೇಕು. ದೇಶದಾದ್ಯಂತ ಇರುವ ೧,೨೦೦ ಸಾರ್ವಜನಿಕ ಸಮಾಜಸೇವಾ ಸಂಘಟನೆಗಳು ಒಗ್ಗೂಡಿ, ೨೦೦೯ರಲ್ಲಿ ನಡೆದ ೧೫ನೆಯ ಲೋಕಸಭಾ ಚುನಾವಣೆಯ ವಿಶ್ಲೇಷಣೆಯೊಂದನ್ನು ನಡೆಸಿದವು. ಇದರಿಂದ ಹೊರಹೊಮ್ಮಿದ ಕೆಲವು ಅಂಶಗಳೆಂದರೆ, (೧) ಹತ್ತು ಲಕ್ಷ ರೂಪಾಯಿ ಹಣವಿದ್ದವನಿಗಿಂತ ೫ ಕೋಟಿ ರೂಪಾಯಿ ಹಣವಿದ್ದವನು ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಸಂಭವ ಸುಮಾರು ೭೫ರಷ್ಟು ಹೆಚ್ಚು; (೨) ೬೪ ಕ್ಯಾಬಿನೆಟ್ ದರ್ಜೆಯ ಸಚಿವರುಗಳ ಪೈಕಿ ೨೩ ಜನರು ೫ ಕೋಟಿಗಿಂತಲೂ ಹೆಚ್ಚು ಆಸ್ತಿಯುಳ್ಳವರು; (೩) ಲೋಕಸಭೆಯ ೫೪೩ ಸದಸ್ಯರ ಒಟ್ಟು ಆಸ್ತಿಪಾಸ್ತಿಗಳ ಮೌಲ್ಯ ೨೮೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು!

ಈ ಭ್ರಷ್ಟಾಚಾರದ ವಿಷವರ್ತುಲದಿಂದ ಹೊರಕ್ಕೆ ಬರುವ ಮಾರ್ಗವಿದೆಯೆ? "ಚಲನೆಯ ತತ್ತ್ವ, ಸಮತೋಲನ ಹಾಗೂ ಪ್ರಹಾರ ಕೌಶಲಗಳಿಂದ ನಮಗಿಂತ ಹೆಚ್ಚು ಬಲಿಷ್ಠರಾದವರನ್ನೂ ಗೆಲ್ಲಬಹುದು" ಎಂಬ ಜಪಾನಿನ 'ಜುಡೋ' ಯುದ್ಧತಂತ್ರ ಇಲ್ಲಿ ನಮ್ಮ ನೆರವಿಗೆ ಬರಬಹುದು. ಮಹಾತ್ಮ ಗಾಂಧಿ ಅಪ್ರತಿಮ ರಾಜಕೀಯ 'ಜುಡೋ' ತಂತ್ರ ಪರಿಣತರಾಗಿದ್ದರು. ಮಹಾ ಸಾಮ್ರಾಜ್ಯಶಾಹಿ ಬ್ರಿಟಿಷ್ ಬಲವನ್ನು ಏಕಾಏಕಿ ಎದುರಿಸುವುದು ಸಾಧ್ಯವೇ ಇಲ್ಲವೆಂದು ಮನಗಂಡ ಅವರು, ಅಹಿಂಸಾತ್ಮಕ ಸತ್ಯಾಗ್ರಹವೆಂಬ ಬೇರೆಯೇ ತಂತ್ರವನ್ನು ಬಳಸಿ ಗೆದ್ದರು. 'ಜುಡೋ' ತಂತ್ರದ ವೈಶಿಷ್ಟ್ಯವೆಂದರೆ, ಶತ್ರುವಿನ ಬಲವೇ ಅವನ ದೌರ್ಬಲ್ಯವಾಗುವ ಹಾಗೆ ಮಾಡುವುದು. ಚುನಾವಣೆಗೆ ನಿಲ್ಲುವ ಉಮೇದುವಾರರ ಆರ್ಥಿಕ ಬಲವೇ ಅವರ ದೌರ್ಬಲ್ಯವಾಗುವಂತೆ ಮಾಡಲು ಸಾಧ್ಯವೇ? ಇದನ್ನು ಸಮಸ್ತ ರಾಜಕೀಯ ಪಕ್ಷಗಳೂ ಒಗ್ಗೂಡಿ ಯೋಚಿಸಬೇಕು. ಕೇಂದ್ರೀಯ ವಿಚಕ್ಷಣಾ ಕಮೀಷನರ್ ಆಗಿದ್ದ ನಾನು, ಅಪರಾಧಿಗಳೆನಿಸಿಕೊಂಡವರು ಆರೋಪದಿಂದ ಮುಕ್ತರಾಗುವವರೆಗೂ ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ಮಾಡಬೇಕೆಂಬ ಸಲಹೆಯನ್ನು ಪದೇ ಪದೇ ನೀಡಿದ್ದೇನೆ.

ತಮ್ಮ ವಿರುದ್ಧ ಬೇಕಾದಷ್ಟು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದ್ದರೂ, ಅಭ್ಯರ್ಥಿಗಳು ಪ್ರಸ್ತುತ ನ್ಯಾಯಾಂಗ ವ್ಯವಸ್ಥೆಯ ಆಮೆನಡಿಗೆಯ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ. ನ್ಯಾಯಾಲಯದಿಂದ ಅವರು ಅಪರಾಧಿಗಳೆಂದು ಘೋಷಣೆಯಾಗುವ ಮುನ್ನವೇ ಅವರು ಸಂಸತ್ತನ್ನು ಪ್ರವೇಶಿಸಿ ಅಧಿಕಾರದ ಪ್ರಯೋಜನಗಳೆಲ್ಲವನ್ನೂ ಪಡೆದುಕೊಂಡು ಆಗಿರುತ್ತದೆ. ಇದನ್ನು ತಪ್ಪಿಸಲು, ಯಾರ ಮೇಲೆ ದೂರುಗಳು ದಾಖಲಾಗಿರುತ್ತವೆಯೋ ಅವರು ಚುನಾವಣೆಗೆ ನಿಲ್ಲದಂತೆ ಮಾಡಬೇಕು. ಆಗ, ಅವರಿಗೆಷ್ಟು ಧನಬಲವಿದ್ದರೂ ಸಹ, ನ್ಯಾಯಾಂಗದ ಆಮೆನಡಿಗೆಯೇ ಅವರನ್ನು ಅಧಿಕಾರದಿಂದ ದೂರವಿರಿಸುತ್ತದೆ; ಕೈ ಕೈ ಹಿಸುಕಿಕೊಳ್ಳುವಂತೆ ಮಾಡುತ್ತದೆ.

ದೇಶದ ರಕ್ಷಣಾವ್ಯವಸ್ಥೆಗಾಗಿ ಶಸ್ತ್ರಾಸ್ತ್ರಗಳ ಕೊಳ್ಳುವಿಕೆಯಲ್ಲಿ ನಡೆಯುವ ಭ್ರಷ್ಟಾಚಾರವು ದೊಡ್ಡ ಪ್ರಮಾಣದ್ದು. ಸಾವಿರಾರು ಕೋಟಿ ರೂಪಾಯಿಗಳ ವ್ಯವಹಾರದ ಕುದುರುವಿಕೆಯಲ್ಲಿ ಅಡಕವಾಗಿರುವ ಲಂಚದ ಪ್ರಮಾಣವೂ ಭಾರೀ ದೊಡ್ಡ ಪ್ರಮಾಣದ್ದೇ. ರಕ್ಷಣಾ ಇಲಾಖೆಯ ಮುಂದಾಳುಗಳೇ ಲಂಚಕ್ಕೆ ಕೈಯೊಡ್ಡುವರೆಂದಾದರೆ ನಮ್ಮ ಸೈನಿಕರು ಎಷ್ಟು ಉತ್ಸಾಹದಿಂದ ಹೋರಾಡಬಹುದು? ಅವರ ನೈತಿಕ ಸ್ಥೈರ್ಯದ ಗತಿಯೇನು? ಇದು ದೇಶವನ್ನು ದುರ್ಬಲಗೊಳಿಸುವುದು ಖಂಡಿತ. ಎಲ್ಲ ರಾಷ್ಟ್ರಗಳನ್ನೂ ಕಾಡುತ್ತಿರುವ ದೊಡ್ಡ ಪಿಡುಗು ಇದು. ರಕ್ಷಣಾ ಇಲಾಖೆಯ